ಬಯಸುತ್ತೇನೆ. ಸ್ಪಷ್ಟವಾದಂತಹ ಮಾಹಿತಿ ತರಿಸಿ ಖುದ್ದಾಗಿ ಅಧಿಕಾರಿಗಳನ್ನು ಕರೆದು ಆಗಲಿಕ್ಕೆ ಪ್ರಯತ್ನ ಮಾಡುತ್ತೇನೆ. ಇದರ ಬಗ್ಗೆ ವಿಶೇಷವಾಗಿ ರಾಜ್ಯದಲ್ಲಿ ತಾವೆಲ್ಲಾ ನೋಡಿದ್ದೀರಿ. ಬಿಸಿ ಊಟದಲ್ಲಿ ಸಾಕಷ್ಟು ಪ್ರಕರಣಗಳು ಆಗಿವೆ. ಆ ರೀತಿಯ ಪ್ರಕರಣಗಳು ಆಗಬಾರದು ಎಂದು ನಾನು ಮುನ್ನೆಚ್ಚರಿಕೆಯಿಂದ ಖುದ್ದಾಗಿ ಎರಡು ಮೂರು ಸಲ ಪ್ರಯತ್ನ ಮಾಡಿದರೂ ಪದೇ ಪದೇ ನಡೆಯುತ್ತಿವೆ. ತೋಗರೀ ಬೇಳೆ ವಿಶೇಷವಾಗಿ ಕಳಪೆ ಮಟ್ಟದ್ದು ಆಗಿದ್ದು ಅದು ಕುದಿಯುವುದಿಲ್ಲ. ಊಟ ಮಾಡಲಿಕ್ಕೆ ಆಗುವುದಿಲ್ಲ ಎನ್ನುವಂತಹ ವಿಷಯ ಬಂದಿದೆ. ಈ ಬಗ್ಗೆ ಹೆಚ್ಚು ಗಮನವನ್ನು ಹರಿಸಬೇಕು. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಇನ್ನೊಮ್ಮೆ ನಾನು ಮಾನ್ಯ ಸಚಿವರಲ್ಲಿ ಒತ್ತಾಯವನ್ನು ಮಾಡುತ್ತಿದ್ದೇನೆ.

ಶ್ರೀ ಎನ್.ಚೆಲುವರಾಯಸ್ವಾಮಿ: ಮಾನ್ಯ ಅಧ್ಯಕ್ಷರೆ, ಬಹಳ ಗಂಭೀರವಾಗಿ ಈ ಅಧಿಕಾರಿಗಳಿಗೆ ಸೂಚನೆಯನ್ನು ಕೊಡುತ್ತೇನೆ. ಶಾಸಕರೂ ಸಹ ಅವರ ಜೊತೆಯಲ್ಲಿ ಸಂಪರ್ಕ ಮಾಡಿ ಮುಂದಿನ ದಿನಗಳಲ್ಲಿ ಯಾವುದೇ ಸಪ್ಲೈ ಮಾಡತಕ್ಕದ್ದೇ ಆಗಲಿ, ಫುಡ್ ಕೊಡತಕ್ಕದ್ದೇ ಆಗಲಿ ಸೂಕ್ತವಾದಂತಹ ವಿತರಣೆ ಮಾಡತಕ್ಕದ್ದು ಆಗಭೇಕು. ಮತ್ತೊಂದು ವಿಚಾರ ತಪ್ಪು ಮಾಡಿದಂತಹವರು ಯಾರೇ ಇರಲಿ. ಅವರ ಮೇಲೆ ಕ್ರಮ ಜರುಗಿಸತಕ್ಕದ್ದಕ್ಕೂ ಕೂಡ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ.

ಹುಣಸೂರು ತಾಲ್ಲೂಕಿನ ಕೆರೆಗಳ ದುರಸ್ಥಿಗಾಗಿ ಹಣ ಬಿಡುಗಡೆ.

100(189); ಶ್ರೀ ದೇವೇಗೌಡ ಜಿ.ಟಿ.(ಹುಣಸೂರು); ಮಾನ್ಯ ಶ್ರೀ ಸಿ.ಎಂ.ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಸಣ್ಣ ನೀರಾವರಿ); ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರು.

ಅ) ಹುಣಸೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಒಟ್ಟು ಕೆರೆಗಳ ಸಂಖ್ಯೆ ಎಷ್ಟು;

ಆ) 2005ನೇ ಸಾಲಿನಲ್ಲಿ ಬಿದ್ದ ಭಾರಿ ಮಳೆಯಿಂದ ಹಾನಿಗೊಳಗಾದ ಕೆರೆಗಳ ಸಂಖ್ಯೆ ಎಷ್ಟು (ಕೆರೆಗಳವಾರು ವಿವರಗಳನ್ನು ನೀಡುವುದು);

ಇ) ಇವುಗಳ ಪೈಕಿ ಎಷ್ಟು ಕೆರೆಗಳ ದುರಸ್ಥಿಗೆ ಸರ್ಕಾರ ಕ್ರಮ ಕೈಗೊಂಡಿದೆ (ವಿವರಗಳನ್ನು ನೀಡುವುದು);

ಈ) ಅವುಗಳ ದುರಸ್ಥಿಗಾಗಿ ಅಗತ್ಯವಿರುವ ಹಣವೆಷ್ಟು ಹಾಗೂ ಬಿಡುಗಡೆ ಮಾಡಿರುವ ಮತ್ತು ಮಾಡಬೇಕಾಗಿರುವ ಹಣದ ಮೊತ್ತ ಎಷ್ಟು;

ಉ) ಅದನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಸಿ.ಎಂ.ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಸಣ್ಣ ನೀರಾವರಿ)

ಅ) ಹುಣಸೂರು ತಾಲ್ಲೂಕಿನಲ್ಲಿ

1. ಸಣ್ಣ ನೀರಾವರಿ ಇಲಾಖೆಯಲ್ಲಿ 48 ಕೆರೆಗಳಿವೆ.

2. ಭಾರಿ ನೀರಾವರಿ ಇಲಾಖೆಯಲ್ಲಿ 48 ಕೆರೆಗಳಿವೆ.

3. ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ 63 ಕೆರೆಗಳಿವೆ.

4. ಒಟ್ಟು 159 ಕೆರೆಗಳಿವೆ.

ಆ) ಹಾನಿಗೀಡಾದ ಕೆರೆಗಳ ಸಂಖ್ಯೆ ಒಟ್ಟು 49.

ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಇ) 49 ಕಾಮಗಾರಿಗಳ ದುರಸ್ಥಿ ಕೈಗೊಳ್ಳಲಾಗಿದೆ.

ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಈ) ಅನುಬಂಧ–1ರಲ್ಲಿ ನೀಡಲಾಗಿದೆ.

ಉ) ಈಗಾಗಲೇ ಬಿಡುಗಡೆ ಮಾಡಲಾಗಿದೆ.

ಅನುಬಂಧ–1

2005–06ನೇ ಸಾಲಿನ ಭಾರಿ ಮಳೆಯಿಂದ ಹಾನಿಗೊಳಗಾಗಿರುವ ಕಾಮಗಾರಿವಾರು ವಿವರಗಳು.

ಹುಣಸೂರು ತಾಲ್ಲೂಕು: (ರೂ.ಲಕ್ಷಗಳಲ್ಲಿ)

ಕ್ರ.ಸಂ.	ಕಾಮಗಾರಿಯ ಹೆಸರು	ಹಾನಿಗೀಡಾಗಿರುವ ಅಂದಾಜು ಮೊತ್ತ	ಬಿಡುಗಡೆಯಾದ ಮೊತ್ತ	ಬಿಡುಗಡೆ ಮಾಡ ಬೇಕಾದ ಮೊತ್ತ	ಕಾಮಗಾರಿಯ ಹಂತ
	ಸಣ್ಣ ನೀರಾವರಿ ಇಲಾಖೆಯ ಕಾಮಗಾರಿಗಳು				
1	ತಾವರೆಕೆರೆ ಏರಿಯ ದುರಸ್ಥಿ	2.00	2.00	0.00	ಪೂರ್ಣಗೊಂಡಿದೆ.
2	ತಾವರೆಕೆರೆ ಹಾಳಾಗಿರುವ ನಾಲೆಗಳ ದುರಸ್ಥಿ	1.50	1.50	0.00	ಪೂರ್ಣಗೊಂಡಿದೆ.
3	ಕಿರಿಯೂರು ನಾಲೆಯಿಂದ 4ನೇ ಕಿ.ಮೀ. ವರೆಗೆ ಒಡೆದು ಹೋಗಿರುವ ಏರಿಯ ದುರಸ್ಥಿ	1.00	1.00	0.00	ಪೂರ್ಣಗೊಂಡಿದೆ.
4	ಉದೂರು ಮುಖ್ಯ ನಾಲೆ 1ನೇ ಕಿ.ಮೀ.ನಲ್ಲಿ ಕೊರೆದು ಹೋಗಿರುವ ಏರಿಯ ದುರಸ್ಥಿ	1.00	1.00	0.00	ಪೂರ್ಣಗೊಂಡಿದೆ.
5	ದೈತ್ಯನಕೆರೆ ಎಡದಂಡೆ ನಾಲೆಯಲ್ಲಿ ದೊಗರುಗಳನ್ನು ಮುಚ್ಚುವುದು.	0.50	0.50	0.00	ಪೂರ್ಣಗೊಂಡಿದೆ.

6	ಹುಸೇನ್ ಪುರ ನಾಲೆ 0.00 ಯಿಂದ 6.50ನೇ ಕಿ.ಮೀ.ವರೆಗೆ ದೊಗರುಗಳನ್ನು ಮುಚ್ಚುವುದು.	0.50	0.50	0.00	ಪೂರ್ಣಗೊಂಡಿದೆ.
7	ಹುಸೇನ್ ಪುರ ನಾಲೆ 6.60 ರಿಂದ 12.00 ನೇ ಕಿ.ಮೀ. ವರೆಗೆ ದೊಗರುಗಳನ್ನು ಮುಚ್ಚುವುದು.	0.60	0.60	0.00	ಪೂರ್ಣಗೊಂಡಿದೆ.
8	ಮುದಗನೂರು ಕೆರೆ ನಾಲೆ ಏರಿಯ ದುರಸ್ಥಿ	1.00	1.00	0.00	ಪೂರ್ಣಗೊಂಡಿದೆ.
9	ಸಿರಿಯೂರು ನಾಲಾ 4.00 ಯಿಂದ 9.00 ನೇ ಕಿ.ಮೀ.ವರೆಗೆ ಒಡೆದು ಹೋಗಿರುವ ಏರಿಯ ದುರಸ್ಥಿ.	0.80	0.80	0.00	ಪೂರ್ಣಗೊಂಡಿದೆ.
10	ಸಿರಿಯೂರುನ ನಾಲಾ 11 ರಿಂದ 17 ಕಿ.ಮೀ.ವರೆಗೆ ಒಡೆದು ಹೋಗಿರುವ ಏರಿ ದುರಸ್ಥಿ	1.00	1.00	0.00	ಪೂರ್ಣಗೊಂಡಿದೆ.
11	ಹನುಮಂತಪುರ ನಾಲೆ ಸರಪಳಿ 8 ರಿಂದ 19ನೇ ಕಿ.ಮೀ. ವರೆಗೆ ಹಾಳಾಗಿರುವ	1.00	1.00	0.00	ಪೂರ್ಣಗೊಂಡಿದೆ.

	ಏರಿ ಮೊಡಬಾಯಿ ಗಾಡಿ ಸೇತುವೆ.				
12	ಕುಟ್ಟವಾಡಿ ಪಿಕಪ್ ಹಾಗೂ ನಾಲಾ ದುರಸ್ಥಿ	1.00	1.00	0.00	ಪೂರ್ಣಗೊಂಡಿದೆ.
13	ವಡಕೆಕಟ್ಟೆ ಮತ್ತು ಎಡದಂಡೆ ಕಟ್ಟೆ ಕೆರೆ ನಾಲಾಗಳ ದುರಸ್ಥಿ	1.00	1.00	0.00	ಪೂರ್ಣಗೊಂಡಿದೆ.
14	ಗೌಡನಕಟ್ಟೆ ಮತ್ತು ಹುಣಸನಕಟ್ಟೆ ಪಿಕಪ್ ದುರಸ್ಥಿ	1.00	1.00	0.00	ಪೂರ್ಣಗೊಂಡಿದೆ.
15	ಕರಿಮುದ್ದನಹಳ್ಳಿ ಕೆರೆ ಬಲದಂಡೆ ನಾಲೆಯಲ್ಲಿ ದೊಗರು ಮುಚ್ಚುವುದು ಮತ್ತು ಏರಿಯ ದುರಸ್ಥಿ.	1.00	1.00	0.00	ಪೂರ್ಣಗೊಂಡಿದೆ.
16	ಸೊಳೆಕೆರೆ ನಾಲಾ ಏರಿ ದುರಸ್ಥಿ.	0.50	0.50	0.00	ಪೂರ್ಣಗೊಂಡಿದೆ.
17	ಗುರುಪುರ ಕೆರೆ ಏರಿ ನಾಲೆ ದುರಸ್ಥಿ.	1.00	1.00	0.00	ಪೂರ್ಣಗೊಂಡಿದೆ.
18	ದಾಸನಪುರ ಪಿಕಪ್ ನಾಲಾ ಏರಿಯ ದುರಸ್ಥಿ	0.50	0.50		ಪೂರ್ಣಗೊಂಡಿದೆ.
19	ಹುಸೇನ್ ಪುರ ನಾಲಾ 14 ರಿಂದ 19 ಕಿ.ಮೀ.ವರೆಗೆ ಒಡೆದು ಹೋಗಿರುವ ಏರಿಯ	0.50	0.50	0.00	ಪೂರ್ಣಗೊಂಡಿದೆ.

	ದುರಸ್ಥಿ				
20	ಹುಸೇನ್ ಪುರ ನಾಲಾ ಏರಿ ದುರಸ್ಥಿ.	0.50	0.50	0.00	ಪೂರ್ಣಗೊಂಡಿದೆ.
21	ಉದ್ದೂರು ನಾಲೆ 28ನೇ ಕಿ.ಮೀ.ನಲ್ಲಿ ಸೇತುವೆ ದುರಸ್ಥಿ	2.00	2.00	0.00	ಪೂರ್ಣಗೊಂಡಿದೆ.
22	ಕರಿಮುದ್ದನಹಳ್ಳಿ ಕೆರೆ ಅಪ್ರೋಚ್ ರಸ್ತೆ ದುರಸ್ಥಿ.	1.00	1.00	0.00	ಪೂರ್ಣಗೊಂಡಿದೆ.
23	ಸಂತೆಕೆರೆ ನಾಲಾ ಏರಿ ದುರಸ್ಥಿ	1.00	1.00	0.00	ಪೂರ್ಣಗೊಂಡಿದೆ.
24	ಉದ್ದೂರು ನಾಲೆ 23.9 ನೇ ಕಿ.ಮೀ. ನಲ್ಲಿರುವ ತೂಬಿನ ದುರಸ್ಥಿ (ಶೆಟ್ಟರ ಮೊಡಬಾಯಿ)	0.50	0.00		ಪೂರ್ಣಗೊಂಡಿದೆ.
25	ಅತ್ತಿಗುಪ್ಪೆಯಿಂದ ಶಿರಿಯೂರು ನಾಲೆಗೆ ಹೋಗುವ ರಸ್ತೆ ದುರಸ್ಥಿ.	0.50	0.50	0.00	ಪೂರ್ಣಗೊಂಡಿದೆ.
26	ಹನಗೂಡು ಮುಖ್ಯ ನಾಲೆ 4ನೇ ಕಿ.ಮೀ.ನಲ್ಲಿ ಏರಿಯ ದುರಸ್ಥಿ.	0.50	0.50	0.00	ಪೂರ್ಣಗೊಂಡಿದೆ.
27	ನಲ್ಲೂರು ನಾಲೆ 12 ಕಿ.ಮೀ. ನಿಂದ ಕುಡ್ಲೂರು ಸೇತುವೆಗೆ ಸೇರುವ ಏರಿಯ ದುರಸ್ಥಿ	1.00	1.00	0.00	ಪೂರ್ಣಗೊಂಡಿದೆ.

28	ಉದ್ದೂರು ಮುಖ್ಯ ನಾಲೆಯಲ್ಲಿ ಬರುವ ಬಸ್ತಿ ಮಾದಹಳ್ಳಿ ಕೆರೆ ಏರಿ ಮತ್ತು ಏರಿ ದುರಸ್ಥಿ.	0.60	0.60	0.00	ಪೂರ್ಣಗೊಂಡಿದೆ.
	ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಯ ಕಾಮಗಾರಿಗಳು				
29	ಹರವೆ ದೊಡ್ಡಕೆರೆ	26.00	26.00	0.00	ತುರ್ತು ದುರಸ್ಥಿ ಮುಗಿದಿದೆ. ಶಾಶ್ವತ ದುರಸ್ಥಿ ಕೈಗೊಳ್ಳಬೇಕಾಗಿದೆ.
30	ಕುಂತಿ ಕೆರೆ	5.70	5.70	0.00	–ಅದೇ–
31	ಗೌರಿ ಕೆರೆ	10.50	10.50	0.00	–ಅದೇ–
32	ಹೊಸಕೆರೆ	1.00	1.00	0.00	ಪೂರ್ಣಗೊಂಡಿದೆ.
33	ಇದರ ಕೆರೆ	0.20	0.20	0.00	ಪೂರ್ಣಗೊಂಡಿದೆ.
34	ಹುಲಿ ಕೆರೆ	0.20	0.20	0.00	ಪೂರ್ಣಗೊಂಡಿದೆ.
35	ಮೋದೂರು ಹೊಸಕೆರೆ	0.20	0.20	0.00	ಪೂರ್ಣಗೊಂಡಿದೆ.
36	ಗರಿಕೆ ಕೆರೆ	0.20	0.20	0.00	ಪೂರ್ಣಗೊಂಡಿದೆ.
37	ಸಿಲುಬೆ ಕೆರೆ	0.50	0.50	0.00	ಪೂರ್ಣಗೊಂಡಿದೆ.
38	ಮುನಿಗೌಡನಕೆರೆ	0.20	0.50	0.00	ಪೂರ್ಣಗೊಂಡಿದೆ.
39	ಗೆಂಡೆಕೆರೆ	0.30	0.20	0.00	ಪೂರ್ಣಗೊಂಡಿದೆ.
40	ಮಂಟಿ ಕೆರೆ	0.50	0.30	0.00	ಪೂರ್ಣಗೊಂಡಿದೆ.
41	ತಮ್ಮಡ್ಡಿಹಳ್ಳಿ ಕೆರೆ	0.50	0.50	0.00	ಪೂರ್ಣಗೊಂಡಿದೆ.
42	ಹರವೆ ಚಿಕ್ಕಕೆರೆ	0.30	0.30	0.00	ಪೂರ್ಣಗೊಂಡಿದೆ.

43	ಮೋದೂರು ಚಿಕ್ಕಕೆರೆ	0.10	0.10	0.00	ಪೂರ್ಣಗೊಂಡಿದೆ.
44	ಅಪ್ಪಾಲಯ್ಯನಕೆರೆ	1.00	1.00	0.00	ಪೂರ್ಣಗೊಂಡಿದೆ.
45	ಮರೂರು ಕೆರೆ	0.30	0.30	0.00	ಪೂರ್ಣಗೊಂಡಿದೆ.
	ಗ್ರಾಮೀಣಾಭಿವೃದ್ಧಿ ಇಲಾಖೆಯ ಕಾಮಗಾರಿಗಳು				
46	ಹುಣಸೂರು ಟೌನಿನ ಹೌಸಿಂಗ್ ಬೋರ್ಡ್ ಹತ್ತಿರ ಗುರುಗಳ ಕಟ್ಟೆ.			0.00	ಪೂರ್ಣಗೊಂಡಿದೆ.
47	ಹುಣಸೂರು ಟೌನಿನ ಹೌಸಿಂಗ್ ಬೋರ್ಡ್ ಹತ್ತಿರ ಗುರುಗಳ ಕೆರೆಯ ಕೆಳಬಾಗದ ಟ್ರೆಂಚ್	11.60	11.60	0.00	ಪೂರ್ಣಗೊಂಡಿದೆ.
48	ಕೆಂಪನಹಳ್ಳಿ ಗ್ರಾಮದ ಎಸ್.ಪಿ.ಕಟ್ಟೆ			0.00	ಪೂರ್ಣಗೊಂಡಿದೆ.
49	ಮಾದಳ್ಳಿ ಮಠದ ಕೆರೆ			0.00	ಪೂರ್ಣಗೊಂಡಿದೆ.
	ಒಟ್ಟು	84.30	84.30	0.00	

ಶ್ರೀ ಬಿ.ಟಿ.ದೇವೇಗೌಡ: ಮಾನ್ಯ ಅಧ್ಯಕ್ಷರೇ, ಸದನದಲ್ಲಿ ಹಲವಾರು ಬಾರಿ ಈ ಸಣ್ಣ ನೀರಾವರಿ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ಉತ್ತರ ಹೇಳಿದ್ದಾರೆ. ಮಾನ್ಯ ಎಲ್ಲಾ ಸದಸ್ಯರೂ ಪ್ರಸ್ತಾಪ ಮಾಡಿದ್ದಾರೆ, ಚರ್ಚೆ ಆಗಿದೆ. ನನ್ನ ಕ್ಷೇತ್ರದ ಬಗ್ಗೆ ನಾನು ಕೇಳಿದ್ದೇನೆ. ಆದರೆ ಸಣ್ಣ ನೀರಾವರಿ ಇಲಾಖೆಯಲ್ಲಿ 48 ಕೆರೆ, ಭಾರೀ ನೀರಾವರಿಯಲ್ಲಿ 48 ಕೆರೆ, ಜಿಲ್ಲಾ ಪಂಚಾಯತಿಗೆ 60 ಕೆರೆ, ಒಟ್ಟು 159 ಕೆರೆಗಳು ಹುಣಸೂರು ಕ್ಷೇತ್ರಕ್ಕೆ ಬರುತ್ತವೆ. 71, ಸಾವಿರದ 100 ಹೆಕ್ಟೇರ್ ರಾಜ್ಯದಲ್ಲಿ ಸಣ್ಣ ನೀರಾವರಿ ಅಚ್ಚುಕಟ್ಟು ಪ್ರದೇಶ ಇದ್ದರೆ, 12,481 ಹೆಕ್ಟೇರ್ ಬರೇ ಹುಣಸೂರು ಕ್ಷೇತ್ರದಲ್ಲಿ ಇದೆ. ನಾವು ಪ್ರತಿ ಬಾರಿ ಅವರಿಗೆ ಕೇಳುತ್ತಿದ್ದೇನೆ. ಒಂದು ಸಾವಿರ ಕೋಟಿ ರೂಪಾಯಿಗಳನ್ನು ನಮ್ಮ ಜಲಾನಯನ ಅಭಿವೃದ್ಧಿ ಇಲಾಖೆ, ನಮ್ಮ ಉತ್ತರ ಕರ್ನಾಟಕದಲ್ಲಿ ನಬಾರ್ಡ್ ಯೋಜನೆಯಡಿಯಲ್ಲಿ ಏನು ಕೊಡುತ್ತಿದ್ದೀರಿ, ಕೊಡಿ. ರಾಜ್ಯ ಸರ್ಕಾರ ಕೂಡ 200, 300 ಕೋಟಿ ರೂಪಾಯಿಗಳ ಅನುದಾನ ಕೊಡುತ್ತಿದ್ದೀರಿ, ನಮಗೆ ಸಂತೋಷ. ಇನ್ನೂ ಸಾವಿರ ಕೋಟಿ ರೂ.ಕೊಡಲಿ. ಆದರೆ ಅದಕ್ಕಿಂತ ಹೆಚ್ಚಿರತಕ್ಕ, ಕಾವೇರಿ ಕೊಳ್ಳ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಬರತಕ್ಕಂಥ ಪ್ರದೇಶಕ್ಕೆ ಅನುದಾನ ಕೊಡುತ್ತಿಲ್ಲ. ನೀವು ಅನುದಾನ ಪ್ರತಿ ಬಾರಿ ಮಾಡಿದರೂ ಕೂಡ ಕೊಡದೇ ಇರುವುದರಿಂದ ಆ ಭಾಗದಲ್ಲಿರತಕ್ಕಂಥ ಕಾವೇರಿ ಕೊಳ್ಳದಲ್ಲಿ ಇರತಕ್ಕಂಥ 10 ಲಕ್ಷ ಎಕರೆ ಪ್ರದೇಶದ ಅಚ್ಚುಕಟ್ಟಿನ ರೈತರಿಗೆ ಅನ್ಯಾಯ ಆಗತಕ್ಕದ್ದನ್ನು ನಾವು ಪ್ರತಿ ಬಾರಿ ಕೇಳುತ್ತಿದ್ದೇನೆ. ಕೇಳುತ್ತಿದ್ದರೂ ಕೂಡ ಅದಕ್ಕೆ ಸರಿಯಾದ ನಿರ್ಣಯವನ್ನು ಸರ್ಕಾರ ಕೈಗೊಂಡಿಲ್ಲ. ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರನ್ನೂ ಕೂಡ ಪ್ರಶ್ನೆ ಮಾಡಿದ್ದೆವು. ಸನ್ಮಾನ್ಯ ಸಿದ್ದರಾಮಯ್ಯನವರು ಹಣಕಾಸಿನ ಸಚಿವರು ಆಗಿದ್ದರು. ಅವರನ್ನೂ ಕೂಡ ಕೇಳಿದ್ದೆವು. ಅವರ ಕಾಲದಲ್ಲಿ ಕೂಡ ಇದಕ್ಕೆ ಏನೂ ಅನುದಾನವನ್ನು ಕೊಡಲಿಲ್ಲ. ಅದರಿಂದ ನಾನು ತಮ್ಮಲ್ಲಿ ಮನವಿ ಮಾಡುವುದು ಏನೆಂದರೆ ಕನಿಷ್ಠ ಈಗ ಕಾವೇರಿ ನಿಗಮ ಅಲ್ಲಿದೆ. ಕಾವೇರಿ ನಿಗಮವನ್ನು ಮುಚ್ಚಿ ಬಿಡಿ. ವೈಂಡಪ್ ಮಾಡಿ ಬಿಡಿ. ಸಣ್ಣ ನೀರಾವರಿ ಬೇಡವೇ ಬೇಡ. ಆ ಕಾವೇರಿ ನಿಗಮಕ್ಕಾದರೂ ಕೊಟ್ಟು ಕಾವೇರಿ ಕೊಳ್ಳದಲ್ಲಿ ಬರತಕ್ಕಂಥ ಈ ಭಾಗದ ಅಚ್ಚುಕಟ್ಟು ಪ್ರದೇಶಕ್ಕೆ ಹಣ ಕೊಟ್ಟು, ಕಾಲುವೆಗಳ ದುರಸ್ಥಿ ಮಾಡಬೇಕು. ಕೆರೆಗಳೆಲ್ಲಾ ಹೂತುಕೊಂಡು ಬಿಟ್ಟಿವೆ. ರೈತರಿಗೆ ನೀರು ಸಿಗುತ್ತಿಲ್ಲ. ಅದರಿಂದ ಕಾವೇರಿ ನಿಗಮಕ್ಕಾದರೂ ಕೂಡ ತುರ್ತಾಗಿ ವಹಿಸಿ ಈ ವರ್ಷದಿಂದಲಾದರೂ ಕೂಡ ಅಚ್ಚುಕಟ್ಟು ಪ್ರದೇಶಕ್ಕೆ ನೀರನ್ನು ಕೊಡದೇ ಹೋದರೆ ಆ ಭಾಗದ ರೈತರಿಗೆ ತುಂಬಾ ಅನ್ಯಾಯ ಆಗುತ್ತಿದೆ. ರೈತರು ಪ್ರತಿಭಟನೆ ಮಾಡುತ್ತಾರೆ. ಬೀದಿಗೆ ಇಳಿದು ಧರಣಿ

ಮಾಡುತ್ತಿದ್ದಾರೆ. ನೀನ್ಯಾಕೆ ಹಣ ಕೊಡುತ್ತಿಲ್ಲ? ಏಕೆ ಮಾಡುವುದಿಲ್ಲವೇ? ಈ ಬಗ್ಗೆ. ನಿಖರವಾದ ಉತ್ತರವನ್ನು ಸನ್ಮಾನ್ಯ ಸಚಿವರು ಕೊಡಬೇಕೆಂದು ತಮ್ಮ ಮೂಲಕ ನಾನು ಮನವಿ ಮಾಡುತ್ತಿದ್ದೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾನ್ಯ ಅಧ್ಯಕ್ಷರೇ, ಮಾನ್ಯ ದೇವೇಗೌಡರು ಹೇಳಿರುವ ರೀತಿಯಲ್ಲಿ ಉತ್ತರ ಕರ್ನಾಟಕಕ್ಕೆ ಸಾಕಷ್ಟು ಹಣವನ್ನು ಕೃಷ್ಣಾ ಬೇಸಿನ್ ರೂಪದಲ್ಲಿ ಬೇರೆ ಬೇರೆ ವಿಧದಲ್ಲಿ ಕೊಡುತ್ತಿದ್ದಾರೆ. ನಮ್ಮಲ್ಲಿ ಇತ್ತ ಕಡೆ ಕಾವೇರಿ ಬೇಸಿನ್‌ಗೂ ಸೇರಿಸಿಲ್ಲ. ಕೆರೆಗಳನ್ನು ಎಂ.ಐಗೆ ಸಾಕಷ್ಟು ಹಣವನ್ನು ಸರ್ಕಾರ ಕೊಡುತ್ತಿಲ್ಲ. ಅದರಿಂದ ದೇವೇಗೌಡರು ಹೇಳಿದಂತಹ ರೀತಿಯಲ್ಲಿ ಆ ಎಂ.ಐ ನಲ್ಲಿ ವೈಂಡಪ್ ಮಾಡಿ ಕಾವೇರಿ ಬೇಸಿಸ್‌ಗೆ ಸೇರಿಸಿ ಹೆಚ್ಚಿಗೆ ಹಣವನ್ನು ಕೊಟ್ಟು ನಮ್ಮ ಕೆರೆಕುಂಟೆಗಳನ್ನು ಅಚ್ಚುಕಟ್ಟು ಮಾಡಿಕೊಡಲಿಕ್ಕೆ ಅನುವು ಮಾಡಿಕೊಡಬೇಕು ಎಂದು ನಿಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ನಿಂಗಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ದೇವೇಗೌಡರು ಪ್ರಸ್ತಾಪ ಮಾಡಿರತಕ್ಕಂಥ ಪ್ರಶ್ನೆ ಇಡೀ ರಾಜ್ಯಕ್ಕೆ ಸಂಬಂಧಪಟ್ಟಿರತಕ್ಕದ್ದು ಆಗಿದೆ. ಈಗ ಕೆರೆಗಳಲ್ಲೆಲ್ಲಾ ಸಾಕಷ್ಟು ಹೂಳು ತುಂಬಿಕೊಂಡಿದೆ. ಈಗ ಹಳೆಯ ಮೈಸೂರು ಭಾಗದಲ್ಲಿ ಕೆಲವು ಪ್ರದೇಶ ಕಾವೇರಿ ಬೇಸಿಸ್‌ಗೆ ಸೇರಿರತಕ್ಕಂದ್ದು, ಆ ಪ್ರದೇಶಗಳಲ್ಲಿ ಕೆರೆಗಳನ್ನು ಅಭಿವೃದ್ಧಿ ಪಡಿಸಬೇಕಾದರೆ ಹೇಳುತ್ತಾರೆ. ಇಲ್ಲ ಇದು ಕಾವೇರಿ ಬೇಸಿಸ್‌ಗೆ ಬರತಕ್ಕಂಥದ್ದು ನಾವೇನಾದರೂ ಇದರ ಅಭಿವೃದ್ಧಿಗೆ ಕೈಹಾಕಿದರೆ ತಮಿಳುನಾಡಿನವರು ಗಲಾಟೆ ಮಾಡುತ್ತಾರೆ ಎನ್ನತಕ್ಕ ಒಂದು ವಾದವನ್ನು ಮುಂದೆ ಇಡುತ್ತಿದ್ದಾರೆ. ಇದರಿಂದ ನಮಗೆ ಏನಾಗುತ್ತದೆ ಅಂದರೆ ನಮಗೆ ಮಳೆ ಬಂದರೆ ಆ ಮಳೆ ನೀರು ಹೋದರೆ ಕೋಡಿನಲ್ಲಿ ಹೋಗುತ್ತದೆ, ಇಲ್ಲವೇ ತೂಬಿನಲ್ಲಿ ಹೋಗುತ್ತದೆ. ಅದನ್ನು ಅಭಿವೃದ್ಧಿ ಪಡಿಸತಕ್ಕಂಥ ಕೆಲಸವನ್ನು ಕೂಡ ಸರ್ಕಾರ ಇವತ್ತಿನವರೆಗೆ ಕೈಗೊಂಡಿಲ್ಲ. ಜೊತೆಗೆ ಎಲ್ಲಾ ಕೆರೆಗಳಲ್ಲಿ ಕೂಡ ಹೂಳು ತುಂಬಿಕೊಂಡಿವೆ. ಹೂಳು ತುಂಬಿಕೊಂಡು ಮಳೆ ಬಂದರೆ 15 ದಿವಸ ಅಥವಾ ಒಂದು ತಿಂಗಳಿಗೆ ಆಗುವಷ್ಟು ನೀರು ಕೂಡ ಆ ಕೆರೆಗಳಲ್ಲಿ ನಿಲ್ಲುವುದಿಲ್ಲ. ಇಂತಹ ಪರಿಸ್ಥಿತಿ ಇದ್ದಾಗ, ಇವತ್ತು ನಮ್ಮ ಕೆರೆಗಳಲ್ಲಿ ಸಾಕಷ್ಟು ನೀರು ಇಲ್ಲ. ಹಿಂದೆ ಏನು ನೀರು ಶೇಖರಣೆ ಆಗುತ್ತಿತ್ತೋ, ಅಷ್ಟು ಶೇಖರಣೆ ಇವತ್ತು ಮಾಡಿಕೊಳ್ಳಬೇಕಾದರೆ ಎಲ್ಲಾ ಕೆರೆಗಳನ್ನು ಕೂಡ ಅಭಿವೃದ್ಧಿಪಡಿಸಕೊಳ್ಳಬೇಕಾದರೆ ಸಹ ಅವಶ್ಯಕತೆ ತುಂಬಾ ಇದೆ. ಅದರಿಂದ ಸರ್ಕಾರ ಈ ಬಗ್ಗೆ ಗಮನ ಹರಿಸಿ, ಇವತ್ತೇನು ಹಳೆಯ ಮೈಸೂರು ಭಾಗದಲ್ಲಿ ಕಾವೇರಿ ಬೇಸಿಸ್ ಇರಬಹುದು,

ಕೃಷ್ಣಾ ಬೇಸಿಸ್ ಇರಬಹುದು, ಕೆರೆಗಳ ಅಭಿವೃದ್ಧಿ ಪಡಿಸತಕ್ಕ ಕ್ರಮದ ಬಗ್ಗೆ ಸರ್ಕಾರ ಹೇಳಬೇಕು.

ಅಧ್ಯಕ್ಷರು: ಆಯಿತು.

ಶ್ರೀ ಹೆಚ್.ಸಿ.ಮಹದೇವ ಪ್ರಸಾದ್: ಮಾನ್ಯ ಅಧ್ಯಕ್ಷರೆ, ಕಾವೇರಿ ಬೇಸಿಸ್‌ನ ಆಶ್ರಯದಲ್ಲಿ ಅದಕ್ಕೆ ಯಾವುದೇ ರೀತಿಯ ಅನುದಾನ ಇಲ್ಲದೇ ಅದಕ್ಕೆ ಹಿಂದೆ ರೈತ ಕಾಯಕ ಕೆರೆ. ಒಂದೊಂದು ಕ್ಷೇತ್ರಕ್ಕೆ ಒಂದೊಂದು ಹೇಳಿ ಅವೂ ಪೂರ್ಣಗೊಳ್ಳಲಿಕ್ಕೆ ಆಗಲಿಲ್ಲ. ಈಗ ಏನು ಆಗಿದೆ? ಬೇರೆ ಇಲಾಖೆಯ ಅನುದಾನದಲ್ಲಿ ಏನಾದರೂ ಮಾಡುವುದಾದರೆ 50 ಸಾವಿರ 25 ಸಾವಿರ, ಒಂದೊಂದು ಕೆರೆಗೆ ಎಂದು ಹಾಕುತ್ತಾರೆ. ಯಾವ ಕೆರೆಯ ಹೂಳೂ ಎತ್ತಲಿಕ್ಕೆ ಆಗುತ್ತಿಲ್ಲ. ಮತ್ತೆ ಆ ಕೆರೆಗಳು ಅದರಲ್ಲೂ ವಿಶೇಷವಾಗಿ ಬಯಲು ಪ್ರದೇಶದಲ್ಲಿರುತ್ತವೆ.

ಈಗ ಯಾವುದೇ ನೀರಾವರಿ ಯೋಜನೆಗಳು ಇಲ್ಲದೇ ಇರುವಂತಹ ತಾಲ್ಲೂಕುಗಳಲ್ಲಿ ಸಣ್ಣ ನೀರಾವರಿ ಇಲಾಖೆಯ ಟ್ಯಾಂಕ್‌ಗಳಿಂದಲೇ ಅಲ್ಪಸ್ವಲ್ಪ ನೀರು ಶೇಖರಣೆ ಮಾಡಲಿಕ್ಕೆ ಅವಕಾಶ ಇರುವಂತಹದು. ಅಲ್ಲಿ ಯಾವುದೇ ರೀತಿ ಬಯಲು ಸೀಮೆ ವಿಶೇಷವಾಗಿ ಕಾವೇರಿ ಬೇಸಿನ್ ವ್ಯಾಪ್ತಿಯಲ್ಲಿರುವಂತಹ ಸಣ್ಣ ನೀರಾವರಿ ಇಲಾಖೆಗೆ ಸೇರಿದಂತಹ ಕೆರೆಗಳ ಪರಿಸ್ಥಿತಿಯನ್ನು ನಾವು ಹೇಳುವುದಕ್ಕೇ ತೀರದು. ಅದಕ್ಕೇನಾದರೂ ವಿಶೇಷವಾದಂತಹ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಳ್ಳಬೇಕು. ಇಲ್ಲದೇ ಇದ್ದರೆ ಆ ಕೆರೆಗಳು ಇದ್ದೂ ಆ ಕೆರೆ ಆಟದ ಮೈದಾನಗಳ ತರಹ ಆಗುತ್ತದೆ. ಈಗ ಕ್ರಿಕೆಟ್ ಆಡುವುದಕ್ಕೆ ಆಟದ ಮೈದಾನಗಳಾಗಿ ಕುಳಿತಿವೆ. ಅದರಿಂದ ಕುಡಿಯುವ ನೀರಿಗೂ ಅನುಕೂಲ ಇಲ್ಲ. ವ್ಯವಸಾಯಕ್ಕೂ ಅದನ್ನು ಬಳಸಲು ಆಗುತ್ತಿಲ್ಲ. ಕೆರೆಗಳು ಮಾತ್ರ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಇದೆ. ಅದಕ್ಕೇನಾದರೂ ಸರ್ಕಾರ ಜವಾಬ್ದಾರಿಯಾಗಿ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಸೊರಬ): ಮಾನ್ಯ ಅಧ್ಯಕ್ಷರೆ, ಸಣ್ಣ ನೀರಾವರಿ ಇಲಾಖೆ ಬಗ್ಗೆ ಬಹಳಷ್ಟು ಒತ್ತಡವನ್ನು ನಾವು ಮುಂಚಿನಿಂದಲೂ ಮಾಡತಕ್ಕಂಥ ಪ್ರಯತ್ನ ಮಾಡುತ್ತಲೇ ಬಂದಿದ್ದೇವೆ. ಅಂದರೆ, ರಾಜ–ಮಹಾರಾಜರ ಕಾಲದ ಬಗ್ಗೆ ನಾನು ಹೇಳುವುದು. ಅಲ್ಲಿಂದ ತದನಂತರ ಕಾಲದಿಂದ ಕಾಲಕ್ಕೆ ಅದೆಲ್ಲ ಕೈಬಿಟ್ಟು ಹೋಯಿತು. ನಾನು ಮೊನ್ನೆ ಕೂಡ ಮಾನ್ಯ ಅರ್ಥ ಸಚಿವರಲ್ಲಿ ವಿನಂತಿಸಿಕೊಂಡೆ. ಇರಿಗೇಶನ್ ಡಿಪಾರ್ಟ್‌ಮೆಂಟ್‌ನಲ್ಲಿ ಏನು ಹಣಕಾಸು ಕೊರತೆ ಇದೆ, ಅದಕ್ಕೆ ನೀವು ಅದರಲ್ಲಿ 150, 200 ಕೋಟಿ ರೂ ಕೊಡುವುದು ಮಾಡಬೇಡಿ. ಅದರಲ್ಲಿ 25% of the total irrigation Budget

ನಲ್ಲಿ ಇದನ್ನು ಮಾಡಿಕೊಳ್ಳಿ. ಆಗ ನಿಮಗೆ ಬಹಳ ದೊಡ್ಡ ಪ್ರಮಾಣದಲ್ಲಿ ಕೆಲಸ-ಕಾರ್ಯಗಳು ನಡೆಯುತ್ತವೆ. ಇಲ್ಲದಿದ್ದರೆ, ಯಾವುದೇ ಕಾರಣಕ್ಕೂ ಇದು ಆಗುವುದಿಲ್ಲವೆಂದು ಮಾತನಾಡಿದೆ. ಇದಕ್ಕೆ ಮುಖ್ಯವಾಗಿ ಒಂದು ಕಡೆ ನಮ್ಮ ಕೆರೆ-ಕಟ್ಟೆಗಳನ್ನು ಏನಾದರೂ ಮಾಡಬೇಕೆನ್ನುವುದಾದರೆ, ಇನ್ನೊಂದು ಕಡೆ ಹೊಳೆಯೊಳಗೆ ಅದರ ಬಗ್ಗೆ ಗಮನಹರಿಸಬೇಕು. ಆರು ಅಡಿಗೆ ಬ್ಯಾರೇಜಸ್ ಮಾಡುತ್ತೇವೆ especially ಕೋಲಾರ ಜಿಲ್ಲೆಯಲ್ಲಿ dikes ಅಂತ ಮುಂಚೆ ಗೊಡೆಯನ್ನು ನೆಲದೊಳಗೆ ಕಟ್ಟಿ... ಸೀಪೇಜ್ ಹೋಗುತ್ತದೆಂದು ಮಾಡಿದ್ದರು. ಕೋಲಾರದಲ್ಲಿ ಕೂಡ ನಾವು ಅಂತರ್ಜಲ ವೃದ್ದಿಗೊಳಿಸಬೇಕೆಂದರೆ We will have to do dikes. ಒಳಗಡೆ ಗೋಡೆ ಕಟ್ಟಿ ಅದನ್ನು ಮಾಡುವುದು, ಬ್ಯಾರೇಜಸ್‌ಗಳನ್ನು ಮಲೆನಾಡು ಭಾಗಕ್ಕೆ ಅಲ್ಲಿ ಮಾಡುವುದು, ಪಶ್ಚಿಮವಾಹಿನಿ ಆ ಕಡೆ ನಾವು ಘಟ್ಟದಿಂದ ಕೆಳಗಡೆ ಇರುವ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳಿಗೆ ಮಾಡುವುದು. ಇದರ ಬಗ್ಗೆ ತಾವು ಹೆಚ್ಚು ಒತ್ತು ಕೊಡಬೇಕೆಂದು ವಿನಂತಿಸಿಕೊಂಡಿದ್ದೇನೆ. One more point, ಇಲ್ಲಿ ಮಳೆಯಿಂದ ಹಾನಿಯಾಗಿರುವ ಕೆರೆಗಳೇನಿವೆ, ಈಗಾಗಲೇ ಸುಮಾರು 5-6 ತಿಂಗಳುಗಳಿಂದ ಕೆಲವಕ್ಕೆ ಮಾತ್ರ ಸ್ವಲ್ಪ ದುಡ್ಡು ಕೊಟ್ಟಿದ್ದೀರಿ. ಈಗ ಎಲ್ಲದಕ್ಕೂ ಕೂಡ. ಮರಳು ಚೀಲ ಹಾಕಿ ಇಟ್ಟಿದ್ದೇವೆ. ಈಗ ಮತ್ತೆ ಮಳೆಯಾದರೆ ಇನ್ನೊಂದು ತಿಂಗಳು ಅಥವಾ ಈ ಸಲ Early Monsoon ಎಂದು predict ಮಾಡುತ್ತಿದ್ದಾರೆ. ಮೇ ಮೊದಲ ವಾರದಲ್ಲಿ ಮಳೆ ಇದೆ ಎನ್ನುವುದಾದರೆ ಬಹಳ ತೊಂದರೆಯಾಗುತ್ತಿದೆ. ಈಗ ಎಲ್ಲಾ ಕೆರೆಗಳಿಗೂ ಮರಳು ಚೀಲ ಹಾಕಿ ಇಟ್ಟಿದ್ದೇವೆ. ಈಗ ಮಲೆನಾಡಿನ ಭಾಗದಲ್ಲಿ ಎಲ್ಲಿಯೂ ಯಾವುದಕ್ಕೂ ದುಡ್ಡು ಕೊಟ್ಟಿಲ್ಲ. ನೀವು ಕೊಡಗಿನಿಂದ ಹಿಡಿದು ಬೆಳಗಾಂವರೆಗೂ ಎಲ್ಲಿಯೂ ಕೂಡ ಸ್ವಲ್ಪ ಸ್ವಲ್ಪ 20-25 ಪರ್ಸೆಂಟ್ ಕೊಟ್ಟಿದ್ದಾರೆ. ಮರಳು ಚೀಲ ಹಾಕಿ ಇಟ್ಟಿದ್ದೇವೆ. ಈಗ ಮತ್ತೆ ಮಳೆ ಬಂದರೆ, ಅವೆಲ್ಲಾ ಕೊಚ್ಚಿಕೊಂಡು ಹೋಗುತ್ತದೆ. ಮತ್ತೆ ಯಥಾಪ್ರಕಾರ ನಾವು ರೈತರ ಹತ್ತಿರ ನಿಲ್ಲಬೇಕಾಗುತ್ತದೆ. ದಯಮಾಡಿ ತಾವು ಕಂದಾಯ ಸಚಿವರ ಹತ್ತಿರ ಮಾತನಾಡಿ ಈ ಮಳೆಯಿಂದ ತುತ್ತಾಗಿರುವ ಮಳೆಯಿಂದ ಒಡೆದು ಹೋಗಿರುವ ಕೆರೆಗಳೇನಿವೆ. ಅದಕ್ಕೆ ಪ್ರೆಯಾರಿಟಿಯಲ್ಲಿ ಮತ್ತು ತಾಲ್ಲೂಕುವಾರು ಮಾಹಿತಿ ನಮ್ಮ ಹತ್ತಿರ ಇದೆ. ತುರ್ತಾಗಿ 4 ಕೋಟಿ ರೂಪಾಯಿಗಳಷ್ಟು ಎಸ್ಟಿಮೇಟ್ ಮಾಡಿ ಇಟ್ಟಿದ್ದೇವೆ. ಸಣ್ಣ ನೀರಾವರಿ ಇಲಾಖೆಗೆ ಇಲ್ಲಿಯವರೆಗೆ ಕೊಟ್ಟಿರುವುದು ಮತ್ತು ಅದಕ್ಕಿಂತಲೂ ಕೆಳಗಡೆ ಇರುವ ಜಿಲ್ಲಾ ಪಂಚಾಯತ್ ಮತ್ತು ಗ್ರಾಮ ಪಂಚಾಯತಿಗೆ ಏನು ಹ್ಯಾಂಡ್ ಓವರ್ ಮಾಡಲಾಗಿದೆ. 20 ರಿಂದ 25

ಪರ್ಸೆಂಟ್‌ನಷ್ಟು ಹಣ ಮಾತ್ರ ಕೊಟ್ಟಿದ್ದಾರೆ. ದಯಮಾಡಿ ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಕಂದಾಯ ಇಲಾಖೆ ಹೆಚ್ಚಿನ ಹಣಕಾಸು ಪಡೆದುಕೊಂಡು ಮಳೆ ಹಾನಿಗೆ ತುತ್ತಾಗಿರುವ ಕೆರೆಗಳಿಗೆ ಹೆಚ್ಚಿನ ಒತ್ತು ಕೊಡಬೇಕು.

ಶ್ರೀ ಸಿ.ಎಂ.ಉದಾಸಿ: ಸನ್ಮಾನ್ಯ ಅಧ್ಯಕ್ಷರೇ, ಶ್ರೀ ಜಿ.ಟಿ.ದೇವೇಗೌಡರು ಕೇಳಿರುವ ಪ್ರಶ್ನೆ ಏನಿದೆ. ಅಲ್ಲಿ ಮಳೆಯಿಂದ ಹಾನಿಯಾಗಿರುವ ತೊಂದರೆಯನ್ನು ನಿವಾರಿಸಿಕೊಳ್ಳುವ ಸಲುವಾಗಿ 84 ಲಕ್ಷ ರೂ ಖರ್ಚು ಮಾಡಿ ಸುಮಾರು 49 ಕೆರೆಗಳ ರಿಪೇರಿ ಕೆಲಸ ಸಂಪೂರ್ಣಗೊಳಿಸಲಾಗಿದೆ. ಆದರೂ ಇನ್ನೂ ಹೆಚ್ಚು ಪ್ರಮಾಣದಲ್ಲಿ ಅಭಿವೃದ್ಧಿ ಆಗಬೇಕಾದರೆ, ಈಗ ಕೊಟ್ಟಿರುವ ಅನುದಾನದ ಪ್ರಮಾಣ ಸಾಕಾಗುವುದಿಲ್ಲ ಎನ್ನುವುದಿದ್ದರೆ, ಸಣ್ಣ ನೀರಾವರಿ ಇಲಾಖೆಗೆ ಬರಬೇಕಾಗಿರುವ ಹಣ ಕಡಿಮೆ ಇದೆಯೆಂಬ ಮಾತನ್ನು ಪ್ರಸ್ತಾಪಿಸಿ ಕಾವೇರಿ ನಿಗಮದಿಂದ ಈ ಕೆರೆಗಳ ಅಭಿವೃದ್ಧಿ ಕಾಮಗಾರಿ ತೆಗೆದುಕೊಳ್ಳಬೇಕಾಗುತ್ತದೆಂಬ ಪ್ರಸ್ತಾವವನ್ನು ನಾವು ಮೊದಲು ಮಾಡಿದ್ದೆವು ಎನ್ನುವ ಮಾತುಗಳನ್ನು ಹೇಳಿದ್ದೀರಿ. ಒಂದು ಸಲ ಇದಕ್ಕೆ 50 ಕೋಟಿ ರೂಪಾಯಿಗಳ ಪ್ರಸ್ತಾವನೆಯನ್ನು ಸಣ್ಣ ನೀರಾವರಿ ಇಲಾಖೆಯಿಂದ ಕಾವೇರಿ ನಿಗಮಕ್ಕೆ ಕಳುಹಿಸಿ ಅದು ಆಗದೇ ಹೋಗಿರುವಂತಹ ಪ್ರಸಂಗ ಇರುವುದರಿಂದ ಇವೊತ್ತು ಅದನ್ನು ಅಭಿವೃದ್ಧಿ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಈ ವರ್ಷ ಸಹ ಅದಕ್ಕೆ 4702 ರಲ್ಲಿ 12 ಕೋಟಿ ರೂಪಾಯಿಗಳಷ್ಟು ಮಾತ್ರ ಹಣದ ಲಭ್ಯತೆ ಇರುವುದರಿಂದ ಇದಕ್ಕೆ 100 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣ ಬೇಕಾಗುತ್ತದೆ. ನೂರು ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣವನ್ನು ಪಡೆಯುವ ಅವಶ್ಯಕತೆಯನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ. ತೆಗೆದುಕೊಂಡು ಕೆಲಸ ಮಾಡಿದರೆ ಸಾಧ್ಯವಾಗುತ್ತದೆ. ಈ ವರ್ಷ 672 ಕೋಟಿ ರೂಪಾಯಿಗಳನ್ನು ಹಣ ತೆಗೆದಿಟ್ಟಿರುವಾಗ ಅದರಲ್ಲಿ ಏನು ಸಾಧ್ಯವಾಗುತ್ತದೆಂದು ನೋಡಿಕೊಂಡು ಹೆಚ್ಚಿನ ಹಣವನ್ನು ಸಣ್ಣ ನೀರಾವರಿಗೆ ಬಿಡುಗಡೆ ಮಾಡುವಂಥ ಕೆಲಸ. ಅದರಲ್ಲೂ ಪ್ರಮುಖವಾಗಿ ಹೊಳೆಗಳಿಗೆ, ನದಿಗಳಿಗೆ ಬ್ಯಾರೇಜ್ ಮಾಡುವ ವಿಚಾರದಲ್ಲಿ ಸನ್ಮಾನ್ಯ ಮಾಜಿ ಸಚಿವರಾದ ಕುಮಾರ್ ಬಂಗಾರಪ್ಪನವರು ಏನು ಸಲಹೆ ಕೊಡುತ್ತಿದ್ದಾರೆ, ಅದನ್ನೂ ಕೂಡ ಗಂಭೀರವಾಗಿ ಪರಿಗಣಿಸಿ ನಬಾರ್ಡ್ ನೆರವಿನೊಂದಿಗೆ ಉಳಿದ ಕಡೆ ಮಾಡುವ ಬಗ್ಗೆ ವಿಚಾರ ಮಾಡಬಹುದು. ಆದರೆ, ಕಾವೇರಿ ಕೊಳ್ಳದಲ್ಲಿ ಇದನ್ನು ಮಾಡುವುದಕ್ಕೆ ಸಾಧ್ಯತೆ ಇರುವುದರಿಂದ ರಾಜ್ಯ ಸರ್ಕಾರದ ಅನುದಾನದಿಂದ ಈ ಕೆಲಸ ಮಾಡಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ಮಾಡುತ್ತೇವೆಂದು ಹೇಳಿ ಸ್ವಾಮಿ. ನಮಗೆ ಸಾಕಷ್ಟು ಹಣ ಇಲ್ಲ. ದಯಮಾಡಿ ಮಂತ್ರಿಗಳು ಹೇಳಬೇಕು. ದಯಮಾಡಿ ಕೆಲಸ ಆಗಬೇಕು.

ಶ್ರೀ ಪಿ.ಎಂ.ಉದಾಸಿ: ಹಣಕಾಸಿನ ನೆರವು ಪಡೆದುಕೊಳ್ಳಬೇಕಾದ ಕೆಲಸದಲ್ಲಿ ಮಾನ್ಯ ಅರ್ಥ ಸಚಿವರೊಂದಿಗೆ ಮಾತನಾಡಿ ತಮ್ಮ ಈ ಗಂಭೀರವಾದ ಹೇಳಿಕೆಗಳೇನಿವೆ. ಅದನ್ನೆಲ್ಲಾ ಸರಿಪಡಿಸುವಂಥ ಕೆಲಸ ಮಾಡುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಎಸ್.ಕುಮಾರ್ ಬಂಗಾರಪ್ಪ: ಮಾನ್ಯ ಸಚಿವರಲ್ಲಿ ಒಂದು ಸ್ಪಷ್ಟೀಕರಣ ಕೇಳಬಯಸುತ್ತೇನೆ. ಕಾವೇರಿ ಕೊಳ್ಳದಲ್ಲಿರುವ ಕೆರೆಗಳಲ್ಲಿ ಹೂಳು ತೆಗೆಯುವ ವಿಚಾರ ಏನು ಮಾಡಿದ್ದೇವೆ, ಸಿಡಬ್ಯೂಸಿ(ಸೆಂಟ್ರಲ್ ವಾಟರ್ ಕಮಿಟಿ) ಹೋದ ಸಂದರ್ಭದಲ್ಲಿ ತಮಿಳುನಾಡು ಅಬ್ಜೆಕ್ಷನ್ ಮಾಡಿತೆಂದು ಇದಕ್ಕೆ ಸ್ಟೇ ಕೊಟ್ಟರು. ನಾವು. ಸ್ಟೇಟ್ ಗವರ್ನಮೆಂಟ್ ಏನು ತೀರ್ಮಾನ ತೆಗೆದುಕೊಂಡೆವೆಂದರೆ, ನಾವು ಯಾವುದೇ ಕಾರಣಕ್ಕೂ ವರ್ಲ್ಡ್ ಬ್ಯಾಂಕ್ ಅಥವಾ ಮತ್ತೊಂದು ಫಂಡ್ ಅನ್ನು ಯೂಸ್ ಮಾಡುವುದಿಲ್ಲ. ಸ್ಟೇಟ್ ಫಂಡ್‌ನಿಂದ ಮಾಡುತ್ತೇವೆಂದು. ಆದಕ್ಕೋಸ್ಕರ. ಕೊಳ್ಳದಿಂದ ಕಾವೇರಿ ನಿಗಮ ಮಾಡಿಕೊಂಡು ನಾವು ಫಂಡ್ ರೈಸ್ ಮಾಡಿರುವುದು. ಹಾಗಾಗಿ. ಮುಖ್ಯವಾಗಿ ಕಾವೇರಿ ಕೊಳ್ಳದಲ್ಲಿರುವ ಕೆರೆಗಳಿಗೆ ಬ್ಯಾರೇಜ್ ನಿರ್ಮಿಸುವ ಬಗ್ಗೆ ನೀವು 625 ಕೋಟಿ ರೂ.ಗಳ ಬಗ್ಗೆ ಏನು ಮಾತನಾಡುತ್ತಿದ್ದೀರಿ. ಅದು ಡಾರ್ಕ್ ಗ್ರೇ ಏರಿಯಾಗೆ. ಕೋಲಾರ, ಬಳ್ಳಾರಿ, ಈ ಕಡೆಯ ಜಿಲ್ಲೆಗಳಿಗೆ ಹೋಗುವುದು. ಆದರೆ, ಕಾವೇರಿ ಕೊಳ್ಳಕ್ಕೆ ಮಲೆನಾಡು ಜಿಲ್ಲೆಗಳಿಗೆ ಬೇಕಾಗಿರುವಷ್ಟು ಹಣವನ್ನು ನಮ್ಮ ರಾಜ್ಯ ಸರ್ಕಾರದಿಂದ ಒದಗಿಸಿಕೊಡಬೇಕು. ವರ್ಲ್ಡ್ ಬ್ಯಾಂಕ್‌ನಿಂದ ನಮಗೆ ಹಣ ಬರುವುದಿಲ್ಲ ಮತ್ತು ಬೇರೆ ಏಜೆನ್ಸಿಯಿಂದಲೂ ಹಣ ಬರುವುದಿಲ್ಲ ಏಕೆಂದರೆ, ಅಬ್ಜೆಕ್ಷನ್ಸ್ ಇದೆ. ಸಿಡಬ್ಯೂಸಿಯಲ್ಲೂ ನಮಗೆ ಅಬ್ಜೆಕ್ಷನ್ ಇದೆ. ಹಾಗಾಗಿ, ನಮಗೆ ಕಾವೇರಿ ಕೊಳ್ಳದಲ್ಲಿ ಏನಾದರೂ ಕೆಲಸ ನಡೆಯಬೇಕೆನ್ನುವುದಾದರೆ, ನಮ್ಮ ರಾಜ್ಯ ಸರ್ಕಾರ ಇದಕ್ಕೆ ಹಣ ಒದಗಿಸಿಕೊಟ್ಟು ಸಂಪೂರ್ಣ ಕೆಲಸಕ್ಕೆ ಮುಂದಾದರೆ ಮಾತ್ರ ಕೆಲಸ-ಕಾರ್ಯಗಳು ನಡೆಯುತ್ತದೆಯೇ ಹೊರತು ಕೆರೆಗಳ ಕೆಲಸ ಯಾವುದೇ ಕಾರಣಕ್ಕೂ ಆಗುವುದಿಲ್ಲ. Because, Tamilnadu has put up objections earlier on this line.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ಅಧ್ಯಕ್ಷರೆ, ಇದು ತಮಗೂ ಬರುತ್ತದೆ. ನೀವೂ ಆ ಭಾಗದ ರೈತರ ಪರವಾಗಿ ದನಿ ಹಾಕಬೇಕು.

ಅಧ್ಯಕ್ಷರು: ಈಗ ಕಾವೇರಿ ಅಭಿವೃದ್ಧಿ ನಿಗಮವೇನಿದೆ, ಅದರಲ್ಲಿ ಸಣ್ಣ ನೀರಾವರಿ ತೆಗೆದುಕೊಳ್ಳುವುದಕ್ಕೆ ಅವಕಾಶ ಇಲ್ಲವೇ?

ಶ್ರೀ ಕೆ.ವೆಂಕಟೇಶ್: ಅಧ್ಯಕ್ಷರೆ, ಅಚ್ಚುಕಟ್ಟು ಪ್ರದೇಶದಲ್ಲಿ ಬರುವ ಕೆರೆಗಳೇನಿವೆ, ಅದಕ್ಕೆ ಪ್ರತ್ಯೇಕವಾಗಿ ನೀವು ಹಣ ನಿಗದಿಪಡಿಸಬೇಕಾಗಿಲ್ಲ. ಹಣ ಕೊಡಬೇಕಾಗಿಲ್ಲ, ನಿಗಮದವರು ಅಚ್ಚುಕಟ್ಟು ಪ್ರದೇಶದಲ್ಲಿ ಬರುವ ಕೆರೆಗಳ ಕಾಮಗಾರಿ ಮಾಡುವುದಕ್ಕೆ ಆದೇಶ ಕೊಟ್ಟರೆ ಸಾಕು. ಇವರು ಅದಕ್ಕೆ ಪ್ರತ್ಯೇಕ ಅನುದಾನವೇನೂ ಕೊಡಬೇಕಾಗಿಲ್ಲವೆಂದು ಹೇಳಬೇಕಾಗುತ್ತದೆ. ರೈತರಿಗೆ ನಿಗದಿಯಾಗಿ ಸಿಗುವ ನೀರು ಸಹ ಲಭ್ಯವಾಗುತ್ತಿಲ್ಲ. ಕಾರಣವೇನೆಂದರೆ, ಕೆರೆಗಳಲ್ಲಿ ಹೂಳು ಎತ್ತುತ್ತಿಲ್ಲ. ಕೆರೆಗಳೆಲ್ಲವೂ ಮುಚ್ಚಿಹೋಗಿವೆ. ಬಂದಂಥ ನೀರು ಹರಿದುಹೋಗುತ್ತಿದೆ. ನಿಜವಾಗಿಯೂ, ರೈತರಿಗೆ ನೀರಿನ ಉಪಯೋಗ ಆಗಬೇಕೆಂದರೆ, ಈ ಕೆರೆಗಳಲ್ಲಿ ಕಡ್ಡಾಯವಾಗಿ ಹೂಳೆತ್ತಲೇಬೇಕು. ಮಳೆಯಾಧಾರಿತ ಕೆರೆಗಳು ಬೇರೆ. ಅಚ್ಚುಕಟ್ಟು ಪ್ರದೇಶದಲ್ಲಿ ಬರುವ ಕೆರೆಗಳು ಬೇರೆ. ದಯಮಾಡಿ ಈಗ ಅಚ್ಚುಕಟ್ಟು ಪ್ರದೇಶದಲ್ಲಿ ಬರುವ ಕೆರೆಗಳಲ್ಲಿ ತಕ್ಷಣ ಹೂಳೆತ್ತುವ ಕೆಲಸ ಮಾಡಿಸಿದರೆ ರೈತರಿಗೆ ಆ ನೀರು ಉಪಯೋಗಕ್ಕೆ ಬರುತ್ತದೆ.

ಶ್ರೀ ಜಿ.ಟಿ.ದೇವೇಗೌಡ: 12.481 ಹೆಕ್ಟೇರ್ ನನ್ನ ಕ್ಷೇತ್ರದಲ್ಲಿದೆ. ಅದಕ್ಕೆ ಅನುದಾನ ಎಷ್ಟು ನಿಗದಿ ಮಾಡುತ್ತಾರೆಂದರೆ, 37 ಲಕ್ಷ ಸ್ವಾಮಿ. ಅಲ್ಲಿರುವ ಗ್ಯಾಂಗ್‌ಮನ್‌ಗಳ ಸಂಬಳಕ್ಕೆ ಅದು ಸಾಲುವುದಿಲ್ಲ. ಇಂದಿನ ಪರಿಸ್ಥಿತಿ ಹೇಗಿರಬಹುದು? ಲೆಕ್ಕ ಹಾಕಿ. ಏಕೆಂದರೆ, ಮಳೆ ನೀರಿನ ಸಂಗ್ರಹಣೆಯನ್ನು ನಾವು ಇಲ್ಲಿ ಮಾಡುತ್ತೇವೆ. ಅಲ್ಲಿ ಬರುವ ನೀರು ಪೂರ್ತಿಯಾಗಿ ತಮಿಳುನಾಡಿಗೆ ಹರಿದು ಹೋಗುತ್ತಿದೆ. ಕೆಆರ್‌ಎಸ್‌ನಲ್ಲಿ ಪೂರ್ತಿ ತುಂಬಿಕೊಂಡ ನೀರು ತಮಿಳುನಾಡಿಗೆ ಹರಿದು ಹೋಗುತ್ತಿದೆ. ಈಗ ನಾಲ್ಕು ಲಿಫ್ಟ್ ಇರಿಗೇಶನ್‌ಗಳಿವೆ. ದೇವರಾಜ ಅರಸುರವರು 2 ಲಿಫ್ಟ್ ಇರಿಗೇಶನ್ ಮಾಡಿದರು. ತಿಮ್ಮೇಗೌಡರು ಎರಡು ಲಿಫ್ಟ್ ಇರಿಗೇಶನ್ ಮಾಡಿದರು. ಈ ನಾಲ್ಕೂ ಲಿಫ್ಟ್ ಇರಿಗೇಶನ್‌ಗಳು ಕೂಡ ಕೆಲಸ ಮಾಡುತ್ತಿಲ್ಲ. ಆ ಲಿಫ್ಟ್ ಇರಿಗೇಶನ್‌ಗಳನ್ನು ಈ ಸಲವಾದರೂ ದುರಸ್ಥಿಗೊಳಿಸುವುದಕ್ಕೆ ಅದಕ್ಕೆ ಹಣ ಕೊಟ್ಟು ನಾವು ಮಾಡಿಸಿಕೊಡುತ್ತೇವೆ ಎನ್ನುವ ಭರವಸೆಯನ್ನು ಮಾನ್ಯ ಮಂತ್ರಿಗಳು ಕೊಡಬೇಕೆಂದು ನಾನು ತಮ್ಮ ಮೂಲಕ ಮನವಿ ಮಾಡುತ್ತಿದ್ದೇವೆ.

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್: ಸಣ್ಣ ನೀರಾವರಿಗೆ ಸಂಬಂಧಿಸಿದಂತೆ ಕಾವೇರಿ ಬೇಸಿನ್‌ನಲ್ಲಿ ಬರುವ ಎಲ್ಲಾ ಶಾಸಕರುಗಳ ಒಂದು ಸಭೆಯನ್ನು ಪ್ರತ್ಯೇಕವಾಗಿ ಕರೆದು ಚರ್ಚೆ ಮಾಡುವುದು ಬಹಳ ಸೂಕ್ತವಾಗಿದೆ.

ಅಧ್ಯಕ್ಷರು: ಈಗ ಮಾನ್ಯ ಸಚಿವರಲ್ಲಿ ಕೇಳುವುದೇನೆಂದರೆ, ಇದು ಬಹಳ ಗಂಭೀರವಾದ ಸಮಸ್ಯೆಯಾಗಿದೆ. ಸಣ್ಣ ನೀರಾವರಿಯನ್ನು ಸರ್ಕಾರಗಳು ಪೂರ್ಣವಾಗಿ ನಿರ್ಲಕ್ಷಿಸುತ್ತಾ ಬಂದಿದೆ. ಅದಕ್ಕೋಸ್ಕರ, ಆ ಭಾಗದ ಎಲ್ಲಾ ಶಾಸಕರುಗಳ ಒಂದು ಪ್ರತ್ಯೇಕ ಸಭೆ ಕರೆದು ಏನು ಮಾಡಬೇಕೆಂಬ ಬಗ್ಗೆ ಒಂದು ಸಮಗ್ರ ಯೋಜನೆ ತಯಾರಿಸಿದರೆ ಏನಾದರೂ ಒಂದು ಪರಿಹಾರ ಸಿಗುತ್ತದೆ.

ಶ್ರೀ ಎಸ್.ಕುಮಾರ್ ಬಂಗಾರಪ್ಪ: ಯೋಜನೆಗಳಿವೆ. ಹಣಕಾಸು ಕೊಟ್ಟರೆ ಸಾಕು. ಯೋಜನೆಗಳು as it is ಇದೆ.

ಅಧ್ಯಕ್ಷರು: ಯೋಜನೆ ಎಂದರೆ ಹಣಕಾಸು ಸಹ ಸೇರುತ್ತದಲ್ಲಾ ಯೋಜನೆ ಮಾಡಿದರೆ ಅದಕ್ಕೆ ಏನು ಹಣಕಾಸು ಬೇಕು, ಯಾವ ಮೂಲದಿಂದ ತೆಗೆದುಕೊಳ್ಳಬೇಕು. ಅದೆಲ್ಲಾ ಚರ್ಚೆಯಾಗಬೇಕಲ್ಲಾ.

ಶ್ರೀ ಎಸ್.ಕುಮಾರ್ ಬಂಗಾರಪ್ಪ: ತಾವೇನಾದರೂ ಪ್ರತ್ಯೇಕ ಸಭೆ ಕರೆಯುತ್ತೇವೆ ಎನ್ನುವುದಾದರೆ ರೆವಿನ್ಯೂ ಡಿವಿಜನ್‌ವೈಸ್ ಸಭೆ ಕರೆಯಬೇಕು.

ಶ್ರೀ ಸಿ.ಎಂ.ಉದಾಸಿ: ಮಾನ್ಯ ಸದಸ್ಯರ ಆತಂಕ ಮತ್ತು ಸಣ್ಣ ನೀರಾವರಿ ಇಲಾಖೆಯನ್ನು ಹಿಂದೆ ನಡೆಸಿದಂಥ ಸನ್ಮಾನ್ಯ ಕುಮಾರ್ ಬಂಗಾರಪ್ಪನವರು ಏನು ಹೇಳುತ್ತಾರೆ. ಅವರ ಅಭಿಪ್ರಾಯಕ್ಕೆ ನಾನು ಮನ್ನಣೆ ಕೊಡುತ್ತೇನೆ. ಹಣದ ಲಭ್ಯತೆ ಇದ್ದರೆ, ಇದೆಲ್ಲಾ ಅಭಿವೃದ್ಧಿಯಾಗುತ್ತದೆಂಬ ಮಾತು ಇದೆ. ಇದಕ್ಕೆ ರಾಜ್ಯ ಸರ್ಕಾರದಿಂದಲೇ ಹಣಕಾಸಿನ ವ್ಯವಸ್ಥೆ ಮಾಡಬೇಕಾಗಿರುವುದು ಅತ್ಯಂತ ಅವಶ್ಯಕ ಅದರ ಬಗ್ಗೆ ಕಾವೇರಿ ಕೊಳ್ಳದಲ್ಲಿರುವ ಶಾಸಕರುಗಳ ಸಭೆ ಕರೆದು ಅದಕ್ಕೆ ಒಂದು ಸೂಕ್ತ ಕ್ರಮ ಕೈಗೊಳ್ಳುತ್ತೇನೆಂದು ಭರವಸೆ ನೀಡುವುದಕ್ಕೆ ಇಚ್ಛೆಪಡುತ್ತೇನೆ.

ಬ್ರಹ್ಮಾವರ ವಿಧಾನಸಭಾ ಕ್ಷೇತ್ರದಲ್ಲಿ ನೂತನ ಶಾಲಾ ಕೊಠಡಿಗಳನ್ನು ನಿರ್ಮಿಸುವುದು.

101(311); ಶ್ರೀ ಜಯಪ್ರಕಾಶ್ ಹೆಗ್ಡೆ ಕೆ.(ಬ್ರಹ್ಮಾವರ); ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು; ಈ ಕೆಳಕಂಡ ಪಶ್ನೆಗಳಿಗೆ ಉತ್ತರಿಸುವರು.

ಅ) ಬ್ರಹ್ಮಾವರ ವಿಧಾನಸಭಾ ಕ್ಷೇತ್ರದಲ್ಲಿ 2003ರ ಶೈಕ್ಷಣಿಕ ವರ್ಷದಿಂದ ಎಷ್ಟು ನೂತನ ಶಾಲಾ ಕೊಠಡಿಗಳನ್ನು ನಿರ್ಮಿಸಲು ಉದ್ದೇಶಿಸಲಾಗಿತ್ತು;

ಆ) ಇದಕ್ಕಾಗಿ ಮೀಸಲಿಟ್ಟು ಅನುದಾನ ಎಷ್ಟು ಬಿಡುಗಡೆಯಾದ ಹಣ ಎಷ್ಟು;